ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ

ದಂಡಾಧಿಕಾರಿಗಳ ನ್ಯಾಯಾಲಯ ದಲ್ಲಿ, ಆಲೂರು .

ಸಿ.ಸಿ.ಸಂಖ್ಯೆಃ 142/2020

| | | |
|---|---|---|
| ಸಾಕ್ಷಿದಾರರ ಹೆಸರು | ನಾರಾಯಣಗೌಡ | ಸಿ.ಡಬ್ಲ್ಯೂಃ 1 |
| ಗಂಡನ / ತಂದೆ ಹೆಸರು | ತಿರುಮಲೇಗೌಡ | ಪಿ.ಡಬ್ಲ್ಯೂಃ 2 |
| ವಯಸ್ಸು | 82 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸಸ್ಥಳ | ಹಸಗನೂರು | |

ಪ್ರಮಾಣ ವಚನ ಬೋಧಿಸಲಾಯಿತು.

ದಿಃ 11.09.2025

ಮುಖ್ಯ ವಿಚಾರಣೆಃ ಸಸಅ ರಿಂದ

ಚಾಸಾ 2 ರವರ ಪರಿಚಯವಿರುತ್ತದೆ. ಸಾಕ್ಷಿ ನಿಪಿ 1 ರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ 1ಬಿ ಎಂದು ಗುರುತಿಸಲಾಯಿತು. ನಿಪಿ 1ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಅದರಲ್ಲಿ ಏನು ಬರೆಯಲಾಗಿದೆ ಗೊತ್ತಿರುವುದಿಲ್ಲ. ಸಾಕ್ಷಿ ಮಾದರಿ ಸೀಲಿನ ನಕಲಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 3 ಎಂದು ಸಹಿಯನ್ನು ನಿಪಿ 3ಎ ಎಂದು ಗುರುತಿಸಲಾಯಿತು. ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

(ಈ ಸಂದರ್ಭದಲ್ಲಿ ಸ.ಸ.ಅ. ರವರ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲುಃ ಸ.ಸ.ಅ ವಕೀಲರಿಂದಃ**

ದಿ.06.11.2019 ರಂದು ಪೊಲೀಸರು ನನ್ನನ್ನು ಮತ್ತು ಚಾಸಾ 2 ರವನ್ನು ಕರಿಗೋಡನಹಳ್ಳಿ ಗ್ರಾಮದಿಂದ ಚಾಕನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಕರೆಸಿ ಶೋಧನಾ ಸಮುಚ್ಚೆತ ವಾರೆಂಟ್ ತಯಾರಿಸಿಕೊಂಡು ಹಸನೂರು ಗ್ರಾಮದ ಬಸ್ ನಿಲ್ದಾಣದ ಬಳಿ ಹೋದಾಗ ಸಮವಸ್ತ್ರದಲ್ಲಿದ್ದ ಪೊಲೀಸರನ್ನು ನೋಡಿ ಒಬ್ಬ ಮಹಿಳೆ ಬಿಳಿ ಚೀಲ ಬಿಟ್ಟು ಓಡಿ ಹೋಗಿರುತ್ತಾರೆ. ಅವರನ್ನು ಹಿಡಿಯಲು ಪ್ರಯತ್ನಿಸಿರುತ್ತೇವೆ ಸಿಕ್ಕಿರುವುದಿಲ್ಲ. ಸ್ಥಳದಲ್ಲಿದ್ದ ಚೀಲವನ್ನು ತೆಗೆದು ನೋಡಲಾಗಿ 90 ಎಂ.ಎಲ್.ನ ಒರಿಜಿನಲ್ ಚಾಯ್ಸ್ ವಿಸ್ಕಿ 26 ಟೆಟ್ರಾ ಪ್ಯಾಕ್ ಗಳು ದೊರಕಿದ್ದು ಅವುಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ ಮೊಹರು ಮ. 2-3.45 ರವರೆಗೆ ಅಮಾನತ್ತುಪಡಿಸಿಕೊಂಡಿರುತ್ತೇವೆ. ಸದರಿ ಮಹಿಳೆಯ ಹೆಸರು ವಿಚಾರಿಸಲಾಗಿ ಭಾಗ್ಯ C/o ಜಯಕುಮಾರ್ ಎಂದು ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 4 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಮು.ಮಾ.1

ಮತ್ತು 2 ಮತ್ತು ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಆಲೂರು .